quickmarketreports.com Date : 07-10-2015

# ದಾಸ್ತಾನು ಮಿತಿಯೊಳಗಿಡಲು ಮಲೇಶ್ಯಾ ಕ್ರೂಡ್ ಪಾಮೆಣ್ಣೆ ಆಮದು ಕಡಿತ

ಮಲೇಶ್ಯಾದಲ್ಲಿನ ಕ್ರೂಡ್ ಪಾಮೆಣ್ಣೆ ದಾಸ್ತಾನು ಮಿತಿಯೊಳಗಿರಿಸುವ ಸಲುವಾಗಿ ಮಲೇಶ್ಯಾ ಕ್ರೂಡ್ ಪಾಮೆಣ್ಣೆಯ ಆಮದು ಕಡಿತಗೊಳಿಸಲಿದೆಯೆಂದು ಪ್ಲಾಂಟೇಶನ್ ಕೈಗಾರಿಕೆ ಮತ್ತು ಕಮೋಡಿಟಿಸ್ ಸಚಿವ ಹೇಳಿಕೊಂಡಿದ್ದಾರೆ. ಏನೂ ಕ್ರಮ ಕೈಗೊಳ್ಳದಿದ್ದರೆ ಅಲ್ಲಿನ ಕ್ರೂಡ್ ಪಾಮೆಣ್ಣೆ ದಾಸ್ತಾನು 3 ಮಿಲಿಯನ್ ಟನ್‌ಗಳಿಗೇರಬಹುದೆಂದು ಹೇಳಲಾಗಿದ್ದು, ದಾಸ್ತಾನು 2 ಮಿಲಿಯನ್ ಟನ್‌ನೊಳಗಿಡಲು ಇಂಡೋನೇಶಿಯಾದಿಂದ ಕ್ರೂಡ್ ಪಾಮೆಣ್ಣೆ ಆಮದು ಕಡಿತಗೊಳಿಸುವುದೆಂದು ಹೇಳಲಾಗಿದೆ. ಆದರೂ ಅದರೊಂದಿಗಿನ ದೀರ್ಘಾವದಿ ಒಡಂಬಡಿಕೆಯು ಮುಂದುವರಿಯಲಿದೆಯೆನ್ನಲಾಗಿದೆ. ದಾಸ್ತಾನು ಮಿತಿಯೊಳಗಿಡಲು ಬಯೋಡಿಸೇಲ್ ಉತ್ಪಾದನೆಗೆ ಕ್ರೂಡ್ ಪಾಮೆಣ್ಣೆ ಬಳಸುವ ಹಾಗೂ ಮತ್ತಿತರ ಕ್ರಮಗಳನ್ನು ಕೈಗೊಳ್ಳಲಾಗುವುದೆನ್ನಲಾಗಿದೆ. ಚೈನಾದಿಂದ ಆಮದು ಇಳಿಕೆಯಾಗಿರುವುದು ಜಾಗತಿಕವಾಗಿ ಉತ್ಪನ್ನಗಳ ವ್ಯವಹಾರದಲ್ಲಿ ಪರಿಣಾಮ ಬೀರಿದೆ. ಭಾರತದಿಂದ ಪಾಮೆಣ್ಣೆ ಆಮದು ಹಿಂದಿನ ವರ್ಷಕ್ಕಿಂತ 30 ಶೇಕಡಾ ಹೆಚ್ಚಳವಾಗಿರುವುದು ಮಲೇಶ್ಯಾದ ರಫ್ತನ್ನು ಸಮತೋಲನದಲ್ಲಿಡಲು ಸಹಾಯಕವಾಗಿದೆಯೆನ್ನಲಾಗಿದೆ.